Regd No B G. 155

3n

14—9—1964

48 th Year
ನೇ ವರ್ಷ

★

Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು:- ಅರಮನೆ ಸಿಂಸ್ಥೆದಾರ್ ಎಂ ವಿ. ಸುಬ್ಬಂರಾಯರು [2 ನಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನಪೈ

Protect the Cow"
ಗೋಸಂರಕ್ಷಣೆ ಮಾಡಿ

ಒರಿಸ್ಸಾ ನಾಯಕತ್ವಕ್ಕೆ

ಉತ್ತರ ಪ್ರದೇಶ ರಾಜ್ಯಪಾಲರಾದ ಶ್ರೀ ಬಿಶ್ವನಾಥ ದಾಸರವರು ಒರಿಸ್ಸಾ ಮುಖ್ಯ ಮಂತ್ರಿತ್ವಕ್ಕೆ ಸೂಚಿಸಲ್ಪಡುವ ಸಂಭವವಿದೆ

★

ಪರಿಶೀಲಿಸಿತು

ಲಂಚ ವಿಚಾರಂದಲ್ಲಿ ಶ್ರೀ ಸಂತಾನಂ ಸಮಿತಿ ವರದಿಯನ್ನು ಕೇಂದ್ರ ಕಾಂಗ್ರೆಸಿನ ಪಾರ್ಲಿಮೆಂಟರಿ ಸಮಿತಿ ಪರಿಶೀಲಿಸಿತು

★

ಬಂದ್ ಇಲ್ಲ

ಭಾರತ ಬಂದ್ ಕ್ರಮ ಬಿಡಲು ಕಮ್ಯೂನಿಸ್ಟ್ ಪಕ್ಷ ನಿರ್ಧರಿಸಿದೆ ಎಂಬ ವರದಿ ಆಗಿದೆ

★

5 ತಿಂಗಳ ಅವಧಿ

ಜಪಾನು ಪಶ್ಚಿಮ ಇಂಡೀಸಿಗೆ ತನ್ನ ಪದಾರ್ಥಗಳನ್ನು 5 ವಾರಂಗಳಲ್ಲಿ ತಲುಪಿಸುವದೆಂದೂ, ಅವರೆ ಭಾರತದ ಪ್ರವಾಸಿಗಾರರು ಅಲ್ಲಿಗೆ ತಮ್ಮ ಪದಾರ್ಥಗಳನ್ನು ತಳ ಹಿಸಲು 5 ತಿಂಗಳು ಹಿಡಿಯುವದೆಂದು ಶ್ರೀಮತಿ ಒಟ್ಟೆ ಕೋಟ್ಯಾಧೀಶ ಶ್ರೀ ನೆವಿಲೆ ವಾಡಿಯಾ ಹೇಳಿದರು.

★

ಅಕ್ಟೋಬರಿನಲ್ಲಿ ಭಾರತ ಸಿಂಹಳ ಪ್ರಧಾನಿಗಳ ಭೇಟಿ ನಡೆಯುವ ಸಂಭವವಿದೆ

★

ಪಾಳೆಯ ಪಂಚಾಂಗ

ದೈವಜ್ಞಶಿಖಾಮಣಿ
ಅಷ್ಟಾವಧಾನ ಮಹಾವಿದ್ವಾನ್. ಧರ್ಮಾಧಿಕಾರಿ
ರಾಜಜ್ಯೋತಿಷ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂದಶ್ಯಮಷ್ಣ ಜೋಯಿಸರವರಿಂದ

15 ಮಂಗಳವಾರ ನವಮಿ ಮೂಲ

ಆರಂಭೋತ್ಸವ

ಹುಬ್ಬಳ್ಳಿಯಲ್ಲಿ ಹೊಸದಾಗಿ ನಿರ್ಮಿಸಿದ ಮಕ್ಕಳ ರಿಮಾಂಡು ಗೃಹದ ಆರಂಭವನ್ನು ಗೃಹಮಂತ್ರಿ ಶ್ರೀ ಆರ್ ಎಂ ಪಾಟೀಲರು ನೆರವೇರಿಸಿದರು.

★

ಮೌನ ವ್ರತ

ಇನ್ನು ಮುಂದೆ ತಾವು ಮೌನವ್ರತ ಕೈಗೊಳ್ಳುವುದಾಗಿಯೂ ಉತ್ತರಗಳನ್ನು ಬರೆಯುವುದಾಗಿಯೂ ಆಚಾರ್ಯ ವಿನೋಬಾ ಭಾವೆ ತಿಳಿಸಿರುವುದಾಗಿ ನಾಗಪುರ ವಾರ್ತೆ. ಆಚಾರ್ಯರಿಗೆ 70 ವರ್ಷಗಳು ತುಂಬಿದವು

★

ನಡವಳಿಕೆ ಸಿದ್ಧತೆ

ಕೇಂದ್ರ ಹಾಗೂ ರಾಜ್ಯಗಳ ಮಂತ್ರಿಗಳಿಗೆ ನಡವಳಿಕೆಯೊಂದು ಸಿದ್ಧವಾಗುವುದಕ್ಕಿನ ದೆಹಲಿಯಲ್ಲಿ ಸೇರಿದ್ದ ಕಾಂಗ್ರೆಸಿನ ಪಾರ್ಲಿಮೆಂಟು ಪಕ್ಷ ಒಪ್ಪಿಗೆ ನೀಡಿದೆ.

ಪ್ರವಾಹ

ಕಡಪದಿಂದ ಬಂದಿರುವ ವರದಿಯು ಪ್ರಕಾರ ಪೆನ್ನಾರು ನದಿಯಲ್ಲಿ ಪ್ರವಾಹವುಂಟಾಗಿದೆ. ಎಂಡು ಗುಡಿಸಲುಗಳು ಕೊಚ್ಚಿಹೋದವು, ನಾಲ್ಕು ಗುಡಿಸಲುಗಳು ಕುಸಿದವು.

★

ಬೆಲೆ ಏರಿಕೆಯ ವಿರುದ್ಧ ಕಮ್ಯೂನಿಸ್ಟ್ ಪಕ್ಷದ ಸತ್ಯಾಗ್ರಹದಲ್ಲಿ ಸಾವಿರ ಪ್ರಮುಖ ಸ್ಥಳಗಳಲ್ಲಿ 80 ಸಾವಿರ ಸತ್ಯಾಗ್ರಹ ನಡೆಸಿದರು ಎಂದು ನವ ದೆಹಲಿ ವಾರ್ತೆ 27 ಸಾವಿರ ಮಂದಿ ಬಂಧಿಸಲ್ಪಟ್ಟರು. ಈ ಸಂಬಂಧದ ಸಭೆಯಲ್ಲಿ, ಪ್ರದರ್ಶನದಲ್ಲಿ 29 ಲಕ್ಷ ಭಾಗವಹಿಸಿದ್ದರು

ವಿವಿಧ ವಿಷಯಗಳು

ಚಾ ಎಸ್ಟೇ ಲೈರವರು ಅನಾರೋಗ್ಯದ ದೆಸೆಯಿಂದ ಅಸ್ಸಾಂತೆಗೆ ರಾಜಿನಾಮೆ ಆಗಿದ್ದಾರೆಂದು ಹಾಂಗಕಾಂಗಿನಿಂದ ವರದಿ ಆಗಿದೆ.

★

ಮಧ್ಯ ಬೊಂಬಾಯಿನ ಜನನಿಬಿಡ ಪ್ರದೇಶದಲ್ಲಿ ಮೂರು ಅಂತಸ್ತಿನ ಮನೆ ಕುಸಿಯಿತು. 8 ಅಗ್ನಿ ಶಾಮಕ ದಳ ಸೇರಿ ಹದಿನಾರು ಜನರು ಗಾಯಗೊಂಡಿರುವರು.

★

ಮದ್ರಾಸಿನಲ್ಲಿ ಮೊನ್ನೆ ಸರ್ಕಾರಿ ನೌಕರಿಗೆ ಕೆಲಸಗಾರರು ಮುಷ್ಕರ ನಡೆದು ಗಲಭೆ ಚದುರಿಸಲು ಪೊಲೀಸರು ಹಗುರವಾದ ಲಾಠಿಪ್ರಹಾರ ಮಾಡಿದರು

—

ಮುಂದಿನ ವಿಧಾನ ಸಭೆ ಅಧಿವೇಶನದೊಳಗೆ ಹೊಸ ಹಾಗೂ ದಕ್ಷನಾದ ಸ್ಪೀಕರರು ಹುಡುಕಲ್ಪಡಬೇಕೆಂದು ಅರು ಜನ್ಸ ಕಾಂಗ್ರೆಸು ಎಂ ಎಲ್ಲೆ ಗಳು ದುಮ್ಮ ಮಂತ್ರಿ ಶ್ರೀಮತಿ ಸುಚೇತಾ ಕೃಪಾಲಿನಿಯವರಿಗೆ ತಿಳಿಸಿದರೆಂದು ಲಕನೌ ವರದಿ ತಿಳಿಸುತ್ತದೆ.

—

ಬಿಳಿಕೆರೆ ಬಳಿ ಇರುವ ಗೋಮಟಗಿರಿಯಲ್ಲಿ ನಿನ್ನೆ ಮಧ್ಯಾಹ್ನ ಗೋಮಟೇಶ್ವರರಿಗೆ ಮಹಾಮಸ್ತಕಾಭಿಷೇಕ ನಡೆಯಿತ್ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರಿಗೆ ಬಿನ್ನವತ್ತಳೆ ಅರ್ಪಿಸಲಾಯಿತು.

★

ವಿಶ್ವಸಂತೆಯು ಭಾರತ ಪರಿಷತ್ತಿಗೆ ಶುಕ್ರವಾರ ಎರಡು ವಿಧೇಯ ಪ್ರೇಕ್ಷಕರು ಭೇಟಿಯಿತ್ತಿದ್ದರೆಂದು ನ್ಯೂಯಾರ್ಕಿನಿಂದ ಬಂದ ವಾರ್ತೆ ತಿಳಿಸುತ್ತದೆ ಆ ಪರೆಲ್ಲರೂ ಪಶ್ಚಿಮತೀರ ಅಮೇರಿಕಾದ ಸಂಸಾರದವರು.

ರಾಷ್ಟ್ರಪತಿ ಡಾ|| ರಾಧಾಕೃಷ್ಣನ್ ರೊಡನೆ ರಷ್ಯ ಪ್ರಧಾನಿ ಕೃಶ್ಚೇವರು 90 ನಿಮಿಷಗಳ ವರಿಗೆ ಮಾತುಕತೆ ನಡೆಸಿದರೆಂದು ಮಾಸ್ಕೋ ವಾರ್ತೆ ಚೀನಾದೊಡನೆ ಗಡಿ ಕಲಹದ ಬಗ್ಗೆ ಕೃಶ್ಚೇವರು ಆಸಕ್ತಿ ತೋರಿದರು

ಈ ತಿಂಗಳು 27 ನೆಯ ತಾ|| ರಾಜಾ ರಾಂಮೋಹನ ರಾಯ್ ವಿಶೇಷ ಅಂಚೆ ಚೀಟಿ ಪ್ರಕಟವಾಗುವುದು

ಗೊಬ್ಬರ ಉತ್ಪಾದನೆಗೆ ಸಂಬಂಧಿಸಿದಂತೆ ನಾನೂರು ಮಿಲಿಯ ಡಾಲರ ವೆಚ್ಚಮಾಡುವ ಕುರಿತು ಮುಂದಿನವಾರ ಅಮೆರಿಕ ತಜ್ಞರು ಮಾತುಕತೆ ನಡೆಸುವರು

ಭಾರತ ಹಾಗೂ ರಷ್ಯದೊಳಗೆ ಗೆಳತನ ಹೆಚ್ಚಿಸಲು ರಷ್ಯ ನಿರ್ಧರ ಮಾಡಿದೆ ಎಂದು ಡಾ|| ರಾಧಾಕೃಷ್ಣನರು ಗಾಂಧಿ ವಾರ್ಷಿಕ ಮಾಸ್ಕೋನಲ್ಲಿ ನಡೆಸಿದ ಭೋಜನಕೂಟದಲ್ಲಿ ರಷ್ಯದ ಅಧ್ಯಕ್ಷ ವಿಷಯ ತಿಳಿಸಿದರು

ಸಿಂಹಳ ಪ್ರಧಾನಿ ಶ್ರೀಮತಿ ಬಂಡಾರ ನಾಯಕೆಯವರೊಡನೆ ಭಾರತದ ವಿದೇಶ ಮಂತ್ರಿ ಶ್ರೀ ಸ್ವರ್ಣಸಿಂಗರು ಮೂರು ವರೆ ಗಂಟೆಗಳ ಕಾಲ ನಿಷ್ಠೆಯ ವಾತಾವರಣದಲ್ಲಿ ಬಂಡಿತವಾದ ಮಾತುಕತೆ ನಡೆಸಿದರು ಪ್ರಾಂತ್ಯವಿಲ್ಲದ ಭಾರತೀಯರ ಕುರಿತು ಮಾತುಕತೆ ನಡೆಯಿತು.

ಇತ್ತೀಚಿನ ತನ್ನ ವ್ಯವಾಹ ಗಳಿಕೆಯ ಹಾಗೂ ಫಲಪ್ರದವಾಗಿದ್ದಿತೆಂದು ನವ ದೆಹಲಿಯಲ್ಲಿ ರಕ್ಷಣಾ ಮಂತ್ರಿ ಶ್ರೀ ವೈ ಬಿ ಚವಾಣರು ನುಡಿದರು

ಸಣ್ಣ ಕೈಗಾರಿಕೆಗಳಿಗೆ ಹೆಚ್ಚು ಹಣ ಒದಗಿಸುವದಾಗಿ ವಾಣಿಜ್ಯ ಮಂತ್ರಿ ಶ್ರೀ ಮನುಭಾಯಿ ಷಾ ತಿಳಿಸಿದರು

ಕಾಶ್ಮೀರದ ಬಗ್ಗೆ ಪಾಕಿಸ್ತಾನ ಬಿಗಿ ಅಗಿಲ್ಲವೆಂದು ಶ್ರೀ ಜಯಪ್ರಕಾಶನಾರಾಯಣರು ನವ ದೆಹಲಿಯಲ್ಲಿ ನುಡಿದರು

ವರ್ಣಾಶ್ರಮಧರ್ಮ

(ಮುಂದುವರಿದುದು)

ಒಂದು ವಿಶಾಲವಾದ ದೇಶಕ್ಕೆ ಅಥವಾ ಚಕ್ರಾಧಿಪತ್ಯಕ್ಕೆ ಕೇವಲ ಒಬ್ಬ ಪ್ರಧಾನಿಯು ಕೆಲಸ ಮಾಡಲು ಸಾಧ್ಯವಾಗಲಾರದು ; ಆದುದರಿಂದಲೇ ಪ್ರತ್ಯೇಕ ಇಲಾಖೆಗಳನ್ನು ವಿಂಗಡಿಸಿ ಪ್ರತಿಯೊಂದು ಇಲಾಖೆಗೂ ಒಬ್ಬೊಬ್ಬ ಮಂತ್ರಿಯನ್ನು ನೇಮಿಸಿಕೊಳ್ಳುತ್ತಾರೆ ; ಯಾವಾಗ ಕೆಲಸದ ವಿಂಗಡಣೆಯಾಯಿತೋ ಆಗಲೇ ಜನಗಳ ವಿಂಗಡಣೆಯೂ ಅವಶ್ಯಕವಾಗುತ್ತೆ. ಇದರಿಂದಲೇ ಪ್ರಪಂಚದಲ್ಲಿ ಎಲ್ಲಾ ಕಾಲದಲ್ಲಿಯೂ ಎಲ್ಲಾ ದೇಶಗಳಲ್ಲಿಯೂ, ಜನಗಳಲ್ಲಿ ಅಸಂಖ್ಯಾತ ನ್ಯಾಯಾಧೀಶರುಗಳು, ಉಪಾಧ್ಯಾಯರುಗಳು, ವೈದ್ಯರುಗಳು, ರೈತರುಗಳು, ವೇದಾಂತಿಗಳು ಇತ್ಯಾದಿಯಾಗಿ ವಿಂಗಡಣೆಯಾಗಿರುತ್ತಾರೆ.

ಕೇವಲ ಸನಾತನಧರ್ಮದಲ್ಲಿಯೇ ಅಲ್ಲ, ಇತರ ಜಾತಿಗಳಲ್ಲಿಯೂ ನಾವು ಜನಗಳ ಭೇದಕ್ಕನುಸಾರವಾಗಿ ವಿಂಗಡಣೆಯನ್ನು ಕಾಣಬಹುದು : ಉದಾಹರಣೆಗೆ ನಾವು ಖುರಾನ್ ಷರೀಫ್ ನೋಡಬಹುದು : ಖುರಾನಿನ 16 ನೇ ಸುರಃ' 71 ನೇ ಆಯತದಲ್ಲಿ ' ದೇವರು ವಿವಿಧ ಜನರಲ್ಲಿ ವಿವಿಧ ಗುಣಗಳನ್ನು ಕೊಟ್ಟಿದ್ದಾನೆ ' ಎಂದಿದೆ ; ಮುಸಲ್ಮಾನರು ಹಿಂದೂಗಳಲ್ಲಿರುವಂತೆ ವರ್ಣಾಶ್ರಮಧರ್ಮವನ್ನು ನಂಬುವುದಿಲ್ಲ : ಆದರೂ ಕೂಡ ಅವರುಗಳಲ್ಲಿ ಷಯಾ, ಸುನ್ನಿ, ಷೂಫಿ, ಸೈಯದ್, ಷೇಕ್, ಮುಘಲ್, ಪಠಾಣ್, ಜೋಲಾ ಮುಂತಾದ ಅನೇಕ ಪಂಗಡಗಳಿವೆ.

ಬೌದ್ಧರೊಳಗೂ ಮುಖ್ಯವಾದ ಮಹಾಯಾನ ಮತ್ತು ಹೀನಯಾನ ಎಂಬ ಪಂಗಡಗಳಿವೆ ; ಕ್ರಿಶ್ಚಿಯನ್ನರಲ್ಲಿ ಮುಖ್ಯವಾದ ರೋಮನ್ ಕಾಥೊಲಿಕ್ ಮತ್ತು ಪ್ರಾಟೆಸ್ಟೆಂಟ್ ಎಂಬ ಎರಡು ಪಂಗಡಗಳಿವೆ ; ಇದರೊಳಗೆ ಅಸಂಖ್ಯಾತ ಒಳಪಂಗಡಗಳಿವೆ. ಪ್ರತಿಯೊಂದು ಕೆಲಸಕ್ಕೂ ಪ್ರತ್ಯೇಕ ಜಾತಿಯನ್ನು ಮಾಡಿದರೆ, ಜಾತಿಗಳು ಅಸಂಖ್ಯಾತವಾಗಿ ಬೆಳೆಯುತ್ತವೆ ಮತ್ತು ಅದರಿಂದಾಗಿ ತೊಂದರೆಯೂ ಇದೆ : ಆದುದರಿಂದಲೇ ಹಿಂದು ಧರ್ಮದಲ್ಲಿ ಅಭಿರುಚಿಗೆ ತಕ್ಕ ಕೆಲಸ ಸಡೆಸಲು, ಉತ್ಕರ್ಷನಾಗಿರಲು, ಮೋಕ್ಷವನ್ನೂ ಹೊಂದಲು ಅನುಕೂಲವಾಗುವಂತೆಯೂ, ಮತ್ತು ಜಾತಿಗಳು ಹೆಚ್ಚಾಗಿ ಬೆಳೆಯದೇ ಇರುವುದಕ್ಕಾಗಿಯೂ ನಾಲ್ಕು ವರ್ಣಗಳನ್ನು ಮಾಡಿದೆ ; ಈ ಜಾತಿಗಳು ಪ್ರಕೃತಿಯ ನಿಯಮವೆಂಬುದಾಗಿ ಸ್ವಾಮಿ ವಿವೇಕಾನಂದರೂ ಹೇಳಿದ್ದಾರೆ. ಮದರಾಸಿನಲ್ಲಿ ಅವರು ಭಾಷಣ ಮಾಡುತ್ತಿದ್ದಾಗ್ಯೆ " ಜಾತಿಗಳು ಯಾವತ್ತಿಗೂ ಇದ್ದೇ ತೀರಬೇಕು ; ಒಂದು ಸಮಾಜವು ಜನಗಳನ್ನು ಬೇರೆಬೇರೆ ಪಂಗಡಗಳಾಗಿ ವಿಭಾಗಿಸಿರುವುದು ಪ್ರಕೃತಿಯ ನಿಯಮ .... ಜಾತೀಯತೆಯು ಪ್ರಕೃತಿಯ ಶಾಸನ ' ಎಂದು ಹೇಳಿದ್ದಾರೆ (ಭಾರತೀ ವಿವೇಕಾನಂದದಿಂದ). ನಾವು ಸಾಮಾನ್ಯವಾಗಿ ನೋಡುವಾಗ ಎಲ್ಲಾ ರೀತಿಯಲ್ಲೂ ಎಲ್ಲಾ ಜನಗಳೂ ಒಂದೇ ರೀತಿಯಾಗಿರುವುದಿಲ್ಲ ವ್ಯವಸಾಯವನ್ನು ಬಾಲ್ಯದಿಂದಲೂ ಮಾಡುತ್ತಿರುವ ಒಬ್ಬನನ್ನು ತಕ್ಷಣವೇ ನ್ಯಾಯಾಧೀಶನನ್ನಾಗಿ ನೇಮಿಸಿದರೆ ಅವನಿಂದ ನ್ಯಾಯ ದೊರಕಬಹುದೆಂಬುದು ಅಸಂಭವ ; ಇದೇ ರೀತಿಯಾಗಿ ಒಂದು ದೇಶದ ಮಂತ್ರಿಗಳನ್ನು ತಕ್ಷಣವೇ ತಲೆಯ ಮೇಲೆ ಸಾಮಾನು ಹೊರಿಸುವ ಕೆಲಸಕ್ಕೆ ನೇಮಿಸಿದರೆ ಅವರಿಂದ ಕೆಲಸ ಆಗಲಾರದು.

— ಮುಂದುವರಿಯುವುದು —

Truth ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಶ್ರೀ ಪ್ರೊಫೆಸರ್ ವಿ.ತಿರುಮಲಾಚಾರ್ ಸಿದ್ಧಾಂತಶಾಸ್ತ್ರಿ M. A., P. R. S. ರವರ ' ವೈಜ್ಞಾನಿಕ ಭಾರತೀಯ ಸಂಸ್ಕೃತಿ ' ಎಂಬ ಲೇಖನದಿಂದ ಸಂಗ್ರಹಿಸಲ್ಪಟ್ಟಿದೆ.

ಆ. ಸ. ಅಯ್ಯಂಗಾರ್, ಹೊಂಗೂರು.

ಗೋರಕ್ಷಣೆ ಪ್ರಾಣದೆಯೂ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ವುಡ್‌ಲ್ಯಾಂಡ್ಸ್ 11-9-64 ರಿಂದ
ಅಮೋಘ ಆರಂಭ
.... ಎ ವಿ ಎಂ. ರವರ ಅತ್ಯಮೋಘ ಹಿಂದಿ ಚಿತ್ರ ....
ಪೂಜಾ ಕೆ ಫೂಲ್
ತಾರಾಗಣ- ಅಶೋಕಕುಮಾರ್, ವೈಜಯಂತಿಮಾಲಾ, ನಿಮ್ಮಿ, ಧರ್ಮೇಂದ್ರ, ನಾಸಿರ್
[ದಿನವಹಿ 3 ಪ್ರದರ್ಶನಗಳು]

ಆಪೆರಾ— ಜನಪ್ರಿಯ 2 ನೇ ವಾರ
ಅತ್ಯಮೋಘ ಕನ್ನಡ ಚಿತ್ರ [ದಿನ 3 ಆಟಗಳು]
ನತಿಶಕ್ತಿ

ಪಾತ್ರಧಾರಿಗಳು— ರಾಜಕುಮಾರ್, ನಾಗೇಶ್ವರರಾವ್, ಜಾನಕಿ, ರಾಜಮ್ಮ

SHAKTI
SUDHA

Superb Tonic

Help The ' Gorakshana'
" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ
ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಮಾಸಪತ್ರಿಕೆ
' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು
ವಾರ್ಷಿಕ ಚಂದಾ 50 ನ ಪೈ
ಅಭಿಮಾನಿಗಳು ರೂ 10 (ಒಂದೇ ಸಾರಿ) ಸಹಾಯಕರು ರೂ 25 (ಒಂದೇ ಸಾರಿ)
ವಿಳಾಸ- ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

ಚಂದಾ ಮಾಯಿದೆ ಮುಗಿದಿರುವವರು ದಯವಿಟ್ಟು ಸಾಧ್ಯವಾದಷ್ಟು ಬೇಗನೆ ಚಂದಾ ಕಳುಹಿಸಬೇಕಾಗಿ ವಿನಂತಿ ; ಅಭಿಮಾನಿಗಳೂ, ಸಹಾಯಕರೂ ಆಗಿ ಹೆಚ್ಚೆಚ್ಚು ಮಂದಿ ನೀವು ನೀಡಿ ಈ ಪವಿತ್ರ ಕಾರ್ಯವು ಹೆಚ್ಚೆಚ್ಚು ಪ್ರಚಾರವಾಗಲು ಸಹಕರಿಸಬೇಕೆಂದು ವಿನಂತಿ ; ಇವರ ಹೆಸರು ಆಗಾಗ್ಗೆ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

Edited, Printed & Published by the Proprietor
Dharma Prachara Nirata M. S. Krishna Rao at the
Satyavadi Press, Chamarajapuram, Mysore 4.